# ಚೆಕ್ ಕಲೆಕ್ಷನ್ ನೀತಿ

ವ್ಯಾಪ್ತಿ: DBS ಬ್ಯಾಂಕ್ ಇಂಡಿಯಾ ಶಾಖೆಗಳು (eLVB ಶಾಖೆಗಳನ್ನುಒಳಗೊಂಡು).

ವಿತರಕ: GTS & T&O

ಆವೃತ್ತಿ: 2.0

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ
ಈ ದಾಖಲೆಯ ಯಾವುದೇ ಭಾಗವನ್ನು ಅಧಿಕೃತ ಒಪ್ಪಿಗೆ ಇಲ್ಲದೆ DBS ಗುಂಪಿನ ಹೊರಗೆ ಯಾವುದೇ ರೂಪದಲ್ಲಿ ಪುನರುತ್ಪಾದಿಸಲಾಗುವುದಿಲ್ಲ.

## 1 ಪರಿಚಯ ಮತ್ತು ಮಾರ್ಗದರ್ಶಿ ತತ್ವ

ಬ್ಯಾಂಕಿನ ಚೆಕ್ ಕಲೆಕ್ಷನ್ ನೀತಿಯು ನಮ್ಮ ಗ್ರಾಹಕರಿಗೆ ಉತ್ತಮ ದರ್ಜೆಯ ಸೇವೆಯನ್ನು ಒದಗಿಸಲು ಮತ್ತು ಉನ್ನತ ಮಟ್ಟದ ಕಾರ್ಯಕ್ಷಮತೆಯನ್ನು ಕಾಪಾಡಿಕೊಳ್ಳಲು ನಡೆಸುವ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ. ಈ ನೀತಿಯು ಗ್ರಾಹಕ ನಿರ್ವಹಣೆಯಲ್ಲಿನ ಪಾರದರ್ಶಕತೆ ಮತ್ತು ನ್ಯಾಯಸಮ್ಮತತೆಯ ತತ್ವಗಳನ್ನು ಆಧರಿಸಿದೆ. ನಮ್ಮ ಗ್ರಾಹಕರಿಗೆ ತ್ವರಿತ ಕಲೆಕ್ಷನ್ ಸೇವೆಗಳನ್ನು ಒದಗಿಸಲು ತಂತ್ರಜ್ಞಾನದ ಹೆಚ್ಚಿನ ಬಳಕೆಗೆ ನಾವು ಬದ್ಧರಾಗಿದ್ದೇವೆ. ಈ ನೀತಿ ದಾಖಲೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ:

- ಭಾರತ ಮತ್ತು ವಿದೇಶಿ ಕೇಂದ್ರಗಳಲ್ಲಿ ಪಾವತಿಸಬೇಕಾದ ಚೆಕ್‌ಗಳು ಮತ್ತು ಇತರ ಇನ್ ಸ್ಟ್ರುಮೆಂಟ್ ಗಳ ಸಂಗ್ರಹ
- ಇನ್ ಸ್ಟ್ರುಮೆಂಟ್ ಗಳ ಸಂಗ್ರಹದಲ್ಲಿ ಸಮಯಾವಧಿ ಮಾನದಂಡಗಳ ಬಗೆಗಿನ ನಮ್ಮ ಬದ್ಧತೆ
- ಹೊರವಲಯದ (ಔಟ್ ಸ್ಟೇಷನ್) ಇನ್ ಸ್ಟ್ರುಮೆಂಟ್ ಗಳು/ಸ್ಥಳೀಯ ಚೆಕ್‌ಗಳ ನೈಜತೆಯ ಪರಿಶೀಲನಾ ಪ್ರಕ್ರಿಯೆಯಲ್ಲಿ ಸಮಯಾವಧಿ ಮಾನದಂಡಗಳನ್ನು ಮೀರಿ ವಿಳಂಬವಾಗುವ ಸಂದರ್ಭಗಳಲ್ಲಿ ಬಡ್ಡಿಯ ಪಾವತಿ
- ರವಾನೆ/ಸಾಗಣೆಯಲ್ಲಿ ಕಳೆದುಹೋದ ಕಲೆಕ್ಷನ್ ಇನ್ ಸ್ಟ್ರುಮೆಂಟ್ ಗಳ ನಿರ್ವಹಣೆ

ಈ ನೀತಿಯು ಎಲ್ಲಾ DBIL ಶಾಖೆಗಳಿಗೆ (ಹಿಂದಿನ ಲಕ್ಷ್ಮಿ ವಿಲಾಸ್ ಬ್ಯಾಂಕ್ / eLVB ಶಾಖೆಗಳನ್ನು ಒಳಗೊಂಡಂತೆ) ಅನ್ವಯಿಸುತ್ತದೆ. ಚೆಕ್ ಕಲೆಕ್ಷನ್ ಪಾಲಿಸಿಯ (CCP) ಒಂದು ಪ್ರತಿಯನ್ನು ವಿನಂತಿಯ ಮೇರೆಗೆ ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಬೇಕು. ಹೆಚ್ಚುವರಿಯಾಗಿ, ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ CCP ಯನ್ನು ಪ್ರದರ್ಶಿಸಬೇಕು ಮತ್ತು ಶಾಖೆಯ ನೋಟಿಸ್ ಬೋರ್ಡ್ ಫೈಲ್‌ಗಳಲ್ಲಿ ಲಭ್ಯ ಇರಬೇಕು.

## 2 ನೀತಿ

**ಕಲೆಕ್ಷನ್ ಗೆ ವ್ಯವಸ್ಥೆಗಳು**

**ಅಕೌಂಟ್ ಪೇಯೀ (ಖಾತೆಗೆ ಪಾವತಿಯಾಗುವ) ಚೆಕ್ ಗಳನ್ನು ಖಾತೆದಾರರ ಖಾತೆಗೆ ಮಾತ್ರ ಜಮಾ ಮಾಡಲಾಗುವುದು ಮತ್ತು ಯಾವುದೇ ಥರ್ಡ್-ಪಾರ್ಟಿ ಖಾತೆಗೆ ಜಮಾ ಆಗುವುದಿಲ್ಲ ಎಂಬುದನ್ನು ಗಮನಿಸಬಹುದು.**

**ಸ್ಥಳೀಯ ಚೆಕ್ ಕಲೆಕ್ಷನ್**

ಪಾವತಿಸಬೇಕಾದ ಎಲ್ಲಾ CTS ಕಂಪ್ಲೈಂಟ್ ಚೆಕ್ ಮತ್ತು ಇತರ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ್ಗಳನ್ನು ಕೇಂದ್ರದಲ್ಲಿ ಚಾಲ್ತಿಯಲ್ಲಿರುವ ಕ್ಲಿಯರಿಂಗ್ ಸಿಸ್ಟಮ್ ಮೂಲಕ ಸ್ಥಳೀಯ ಗ್ರಿಡ್ ಸಿಸ್ಟಮ್ ಅಡಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ. ವಾರದ ದಿನಗಳಲ್ಲಿ ಮತ್ತು ಕೆಲಸದ ಶನಿವಾರದಂದು ನಮ್ಮ ಶಾಖೆಯ ಕೌಂಟರ್‌ಗಳಲ್ಲಿ ಠೇವಣಿ ಮಾಡಿದ ಚೆಕ್‌ಗಳನ್ನು ಅದೇ ದಿನ ಕ್ಲಿಯರಿಂಗ್‌ಗಾಗಿ ಪ್ರಸ್ತುತಪಡಿಸಲಾಗುತ್ತದೆ ಮತ್ತು ಕಟ್-ಆಫ್ ಸಮಯದ ನಂತರ ಠೇವಣಿ ಮಾಡಿದ ಚೆಕ್/ಇನ್ಸ್ಟ್ರುಮೆಂಟ್ ಗಳನ್ನು ಮುಂದಿನ ಕೆಲಸದ ದಿನದ ಕ್ಲಿಯರಿಂಗ್ ಆವರ್ತದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ನೀತಿಯ ಪ್ರಕಾರ, ಕ್ಲಿಯರಿಂಗ್ ಸೆಟಲ್‌ಮೆಂಟ್ ನಡೆಯುವ ಅದೇ ಕೆಲಸದ ದಿನದಂದು ಗ್ರಾಹಕರ ಖಾತೆಗೆ ಜಮಾ ಆಗುತ್ತದೆ (ಅಂದರೆ, ಕ್ಲಿಯರಿಂಗ್‌ನಲ್ಲಿರುವ ಚೆಕ್ / ಇನ್ಸ್ಟ್ರುಮೆಂಟ್ ಪ್ರಸ್ತುತಿಯ ಮುಂದಿನ ಕೆಲಸದ ದಿನ).

ಚೆಕ್ ಗಳು / ಇನ್ಸ್ಟ್ರುಮೆಂಟ್ ಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಮೇಲಿನ ಸಮಯದ ಚೌಕಟ್ಟು ಅನ್ವಯಿಸುವುದಿಲ್ಲ. ಚೆಕ್‌ಗಳು/ ಇನ್ಸ್ಟ್ರುಮೆಂಟ್ ಗಳ ಸ್ವೀಕಾರಕ್ಕಾಗಿ ಶಾಖೆಯ ಕಟ್-ಆಫ್ ಸಮಯ ಮತ್ತು ಕೇಂದ್ರಗಳ ಪಟ್ಟಿಯನ್ನು DBS ಶಾಖೆಗಳಿಂದ ಪಡೆಯಬಹುದು.

CTS ಸ್ಥಳಗಳಲ್ಲಿ ಪ್ರಸ್ತುತಪಡಿಸಲಾದ ನಾನ್-CTS ಇನ್ಸ್ಟ್ರುಮೆಂಟ್ ಗಳ ಕಲೆಕ್ಷನ್ ಗಾಗಿ ಬೇರೆ ಯಾವುದೇ ವಿಧಾನಗಳನ್ನು ಬಳಸಿಕೊಂಡು ಕಲೆಕ್ಷನ್ ಗೆ ಕಳುಹಿಸಲಾಗುತ್ತದೆ. ಆದಾಗ್ಯೂ, CTS ಕ್ಲಿಯರಿಂಗ್ ಅಡಿಯಲ್ಲಿ ನಾನ್-CTS ಇನ್ಸ್ಟ್ರುಮೆಂಟ್ ಗಳಿಗೆ ಪ್ರತ್ಯೇಕ ಸಮಯಾವಧಿ ಇರುವುದಿಲ್ಲ. ಗ್ರಾಹಕರಿಗೆ ನೀಡಲಾದ ಎಲ್ಲಾ ನಾನ್-CTS ಚೆಕ್‌ಗಳನ್ನು ಹಿಂಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡುವಂತೆ ಎಲ್ಲಾ ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗಿದೆ, ಈ ಮೂಲಕ ಅವುಗಳನ್ನು ಹಂತಹಂತವಾಗಿ ತೆಗೆದುಹಾಕಲಾಗುತ್ತದೆ ಮತ್ತು ಗ್ರಾಹಕರು CTS-2010 ಚೆಕ್‌ಗಳನ್ನು ಮಾತ್ರ ಬಳಸುತ್ತಾರೆ. ಬ್ಯಾಂಕ್‌ಗಳು ತಮ್ಮ ಎಲ್ಲಾ ಶಾಖೆಗಳಲ್ಲಿ ಆಯಾ ಗ್ರಿಡ್‌ಗಳ ಅಡಿಯಲ್ಲಿ ಭಾವಚಿತ್ರ ಆಧಾರಿತ CTS ಅನ್ನು ಖಚಿತಪಡಿಸಿಕೊಳ್ಳುವುದನ್ನು RBI ಕಡ್ಡಾಯಗೊಳಿಸಿದೆ.

ನಮ್ಮ ಬ್ಯಾಂಕ್‌ನ ಸ್ವಂತ ಶಾಖೆಗಳಲ್ಲಿ (ವರ್ಗಾವಣೆ ಚೆಕ್‌ಗಳು) ಡ್ರಾ ಮಾಡಿದ ಸ್ಥಳೀಯ ಚೆಕ್‌ಗಳ ಕಲೆಕ್ಷನ್ ಸಮಯಗಳು - ಬ್ಯಾಂಕ್‌ನ ಕೌಂಟರ್‌ಗಳಲ್ಲಿ ಠೇವಣಿ ಮಾಡಲಾದ ಎಲ್ಲಾ ಚೆಕ್‌ಗಳನ್ನು ಅದೇ ದಿನ ಜಮಾ ಮಾಡಲಾಗುತ್ತದೆ.

<u>ಹೊರವಲಯದ (ಔಟ್‌ಸ್ಟೇಷನ್) ಚೆಕ್ ಕಲೆಕ್ಷನ್</u>

ಔಟ್ ಸ್ಟೇಷನ್ ಕೇಂದ್ರಗಳಲ್ಲಿ ಡ್ರಾ ಮಾಡಿದ ಸ್ಥಳೀಯವಾಗಿ ಕಲೆಕ್ಷನ್ ಮಾಡಲಾಗದ ಬೇರೆ ಬ್ಯಾಂಕ್‌ಗಳ ಚೆಕ್‌ಗಳನ್ನು, CTS ಕಂಪ್ಲೈಂಟ್ ಚೆಕ್‌ಗಳನ್ನು ನಿರ್ವಹಿಸುವ ಮತ್ತೊಂದು ಗ್ರಿಡ್ ಮೂಲಕ ಕ್ಲಿಯರಿಂಗ್ ಮಾಡಲು ಪ್ರಸ್ತುತಪಡಿಸಲಾಗುತ್ತದೆ (ಠೇವಣಿ ಸ್ಥಳಕ್ಕಿಂತ ಭಿನ್ನವಾದ), ಉದಾಹರಣೆಗೆ ಸಹಕಾರಿ ಬ್ಯಾಂಕ್‌ಗಳು ನಿರ್ವಹಿಸುವ ನಿರ್ದಿಷ್ಟ CTS ಗ್ರಿಡ್. ಯಾವುದೇ ನಾನ್-CTS ಕಂಪ್ಲೈಂಟ್ ಚೆಕ್‌ಗಳಿಗೆ, ಬ್ಯಾಂಕಿನ ಶಾಖೆಗಳ ಮೂಲಕ ಆ ಕೇಂದ್ರಗಳಿಗೆ ಕಲೆಕ್ಷನ್ ಗಾಗಿ ಕಳುಹಿಸಲಾಗುತ್ತದೆ. CTS-ಕಂಪ್ಲೈಂಟ್ ಔಟ್‌ಸ್ಟೇಷನ್ ಚೆಕ್‌ಗಳಿಗೆ 2 ಕೆಲಸದ ದಿನಗಳಲ್ಲಿ ಜಮಾ ಒದಗಿಸಲಾಗುತ್ತದೆ.

ಠೇವಣಿ ಶಾಖೆಯಲ್ಲಿ ಅನ್ವಯವಾಗುವ ಕಟ್-ಆಫ್ ಸಮಯದೊಳಗೆ ಚೆಕ್‌ಗಳನ್ನು ದಿನ 0 ರಂದು ಠೇವಣಿ ಮಾಡಲಾಗುತ್ತದೆ ಎಂದು ಭಾವಿಸಿ ಕ್ರೆಡಿಟ್ ವ್ಯವಸ್ಥೆಯನ್ನು ನೀಡಲಾಗುತ್ತದೆ. ಕಟ್-ಆಫ್ ನಂತರ ಸ್ವೀಕರಿಸಿದ ಚೆಕ್‌ಗಳಿಗೆ, ಮುಂದಿನ ಕೆಲಸದ ದಿನವನ್ನು, ದಿನ 0 ಎಂದು ಪರಿಗಣಿಸಲಾಗುತ್ತದೆ.

CTS ಕ್ಲಿಯರಿಂಗ್‌ನಲ್ಲಿ ಭಾಗವಹಿಸದ ಬ್ಯಾಂಕ್‌ನಲ್ಲಿ ಚೆಕ್ ಅನ್ನು ಡ್ರಾ ಮಾಡಿದರೆ, ಚೆಕ್ ಅನ್ನು ಕಲೆಕ್ಷನ್ ಆಧಾರದ ಮೇಲೆ ಡ್ರಾವೀ ಬ್ಯಾಂಕ್‌ಗೆ ಕಳುಹಿಸಲಾಗುತ್ತದೆ. ಅಂತಹ ಚೆಕ್‌ಗಳು ಸಾಮಾನ್ಯವಾಗಿ 10 ಕೆಲಸದ ದಿನಗಳಲ್ಲಿ ಕ್ರೆಡಿಟ್ (ಜಮಾ) ಆಗುತ್ತವೆ.

ಚೆಕ್‌ಗಳನ್ನು ಸ್ವೀಕರಿಸಲು ಶಾಖೆಯ ಕಟ್-ಆಫ್ ಸಮಯಗಳು ಮತ್ತು ಕೇಂದ್ರಗಳ ಪಟ್ಟಿಯನ್ನು DBS ಶಾಖೆಗಳಿಂದ ಪಡೆಯಬಹುದು.

<u>ವಿದೇಶಿ ಕರೆನ್ಸಿ ಚೆಕ್ ಕಲೆಕ್ಷನ್</u>

DBS ಶಾಖೆಗಳ ಗೊತ್ತುಪಡಿಸಿದ ಕೌಂಟರ್‌ಗಳಲ್ಲಿ ಗ್ರಾಹಕರಿಂದ ವಿದೇಶಿ ಕರೆನ್ಸಿ ಚೆಕ್‌ಗಳನ್ನು ಬ್ಯಾಂಕ್ ಸ್ವೀಕರಿಸುತ್ತದೆ. ಅಂತಹ ಚೆಕ್‌ಗಳನ್ನು ನಗದು ಪತ್ರದ ವ್ಯವಸ್ಥೆಯಲ್ಲಿ ಸಂಗ್ರಹಿಸಲು ಆಯಾಯ ಬ್ಯಾಂಕ್‌ಗಳ ಮುಂಬೈ ಕಚೇರಿಗೆ ಕಳುಹಿಸಲಾಗುತ್ತದೆ. Nostro ನಲ್ಲಿ ಕ್ರೆಡಿಟ್ ಅನ್ನು ನೋಡಿದ ನಂತರ, ಕೆಳಗೆ ತಿಳಿಸಲಾದ ಕರೆನ್ಸಿಗಳ ಪ್ರಕಾರ ಗ್ರಾಹಕರ ಖಾತೆಗೆ ಜಮಾ ಮಾಡಲಾಗುತ್ತದೆ (ಸ್ಪಷ್ಟ ನಿಧಿಯ ಆಧಾರದ ಮೇಲೆ) -

- USD ಗಾಗಿ: NY (ನ್ಯೂಯಾರ್ಕ್) ನಗರದಲ್ಲಿ ಚೆಕ್ ಅನ್ನು ಡ್ರಾ ಮಾಡಿದರೆ, ಕೂಲಿಂಗ್ ಅವಧಿಯ ನಂತರ, Nostro ನಲ್ಲಿ ಕ್ರೆಡಿಟ್ ದಿನಾಂಕದಿಂದ 14 ನೇ ಕ್ಯಾಲೆಂಡರ್ ದಿನದಂದು. NY ನಗರದ ಹೊರಗೆ ಚೆಕ್ ಅನ್ನು ಡ್ರಾ ಮಾಡಿದರೆ, ಕೂಲಿಂಗ್ ಅವಧಿಯ ನಂತರ Nostro ನಲ್ಲಿ ಕ್ರೆಡಿಟ್ ದಿನಾಂಕದಿಂದ 21 ನೇ ಕ್ಯಾಲೆಂಡರ್ ದಿನದಂದು.
- SGD ಗಾಗಿ: ನಮ್ಮ Nostro ನಲ್ಲಿ ಕ್ರೆಡಿಟ್ ದಿನಾಂಕದಿಂದ ಮುಂದಿನ ಕೆಲಸದ ದಿನ

- GBP ಗಾಗಿ: ನಮ್ಮ Nostro ನಲ್ಲಿ ಕ್ರೆಡಿಟ್ ದಿನಾಂಕದಿಂದ ಮುಂದಿನ ಕೆಲಸದ ದಿನ
- ಇತರೆ ಕರೆನ್ಸಿಗಳಿಗೆ: ಕ್ರೆಡಿಟ್ ಸ್ಪಷ್ಟ ನಿಧಿಯ ಆಧಾರದ ಮೇಲೆ ನಮ್ಮ Nostro ನಲ್ಲಿ ಕ್ರೆಡಿಟ್ ದಿನಾಂಕದಿಂದ ಮುಂದಿನ ಕೆಲಸದ ದಿನ.

ಅಂದಿನ ಕ್ಯಾಲೆಂಡರ್ ದಿನವು ಭಾರತದಲ್ಲಿ ರಜಾದಿನವಾಗಿದ್ದರೆ, ಮುಂದಿನ ಕೆಲಸದ ದಿನವನ್ನು (ಶನಿವಾರ ಹೊರತುಪಡಿಸಿ) ಅಂತಿಮ ಕ್ರೆಡಿಟ್ ದಿನವಾಗಿ ತೆಗೆದುಕೊಳ್ಳಲಾಗುತ್ತದೆ. ನಂತರ ಯಾವುದೇ ಕಾರಣದಿಂದ ಚೆಕ್ ಹಿಂತಿರುಗಿದರೆ, FCY ಮೊತ್ತಕ್ಕೆ ಸಮಾನವಾದ ಮೊತ್ತವನ್ನು ಗ್ರಾಹಕರ ಖಾತೆಯಿಂದ ಡೆಬಿಟ್ (ಕಡಿತ) ಮಾಡಲಾಗುತ್ತದೆ. ಮೇಲೆ ನಿರ್ದಿಷ್ಟಪಡಿಸಿದ ನಿಗದಿತ ದಿನಾಂಕಗಳನ್ನು ಮೀರಿ ಗ್ರಾಹಕರ ಖಾತೆಗೆ ಜಮಾ ವಿಳಂಬವಾದರೆ, ವಿಳಂಬದ ಅವಧಿಗೆ ಚಾಲ್ತಿಯಲ್ಲಿರುವ ದೇಶೀಯ ಉಳಿತಾಯ ಬ್ಯಾಂಕ್ ಬಡ್ಡಿ ದರದ ಪ್ರಕಾರ ಪರಿಹಾರವನ್ನು ಪಾವತಿಸಲಾಗುತ್ತದೆ. DBS ಇಂಡಿಯಾ ತನ್ನ ಗ್ರಾಹಕರ FCY ಚೆಕ್‌ಗಳನ್ನು ಕ್ಲಿಯರಿಂಗ್ ಮಾಡುತ್ತದೆ ಆದೇ ರೀತಿ ಕಲೆಕ್ಟಿಂಗ್ ಬ್ಯಾಂಕ್ ಆಗಿ DBS ಇಂಡಿಯಾವು DBS ಸಿಂಗಾಪುರ್ ನೀಡಿದ SGD ಡ್ರಾಫ್ಟ್‌ಗಳನ್ನು ಸಹ ಕ್ಲಿಯರಿಂಗ್ ಮಾಡುತ್ತದೆ.

<u>ವಿಳಂಬ ಕಲೆಕ್ಷನ್ ಗಾಗಿ ಬಡ್ಡಿ ಪಾವತಿ</u>

ಮೇಲೆ ತಿಳಿಸಿದ ಸಮಯದ ಚೌಕಟ್ಟುಗಳನ್ನು ಮೀರಿದ ವಿಳಂಬದ ಅವಧಿಗೆ DBS ಬ್ಯಾಂಕ್ ತನ್ನ ಗ್ರಾಹಕರಿಗೆ ವಿಳಂಬವಾದ ಕ್ರೆಡಿಟ್‌ಗೆ ಬಡ್ಡಿಯನ್ನು ಪಾವತಿಸುತ್ತದೆ. ಗ್ರಾಹಕರಿಂದ ಯಾವುದೇ ಕ್ಲೈಮ್ ಅಗತ್ಯವಿಲ್ಲದೇ ಬ್ಯಾಂಕಿನ ಪರಿಹಾರ ನೀತಿಯ ಮಾರ್ಗಸೂಚಿಗಳ ಪ್ರಕಾರ ವಿಳಂಬದ ಅವಧಿಗೆ ಪರಿಹಾರವನ್ನು ಪಾವತಿಸಲಾಗುತ್ತದೆ.

**<u>ಔಟ್‌ಸ್ಟೇಷನ್ ಕ್ಲಿಯರಿಂಗ್‌ಗಾಗಿ ಸ್ವೀಕರಿಸಿದ ಚೆಕ್‌ಗಳಿಗೆ ತಕ್ಷಣದ ಕ್ರೆಡಿಟ್</u>**

ಯಾವುದೇ CTS ಗ್ರಿಡ್‌ಗಳ ಮೂಲಕ CTS ಕ್ಲಿಯರಿಂಗ್‌ಗಾಗಿ ಕಳುಹಿಸಲಾಗದ CTS ಕಂಪ್ಲೈಂಟ್ ಚೆಕ್‌ಗಳಿಗೆ, ವೈಯಕ್ತಿಕ ಖಾತೆದಾರರ ಔಟ್‌ಸ್ಟೇಷನ್ ಚೆಕ್‌ಗಳಿಗೆ ಒಟ್ಟು ಮೌಲ್ಯ ರೂ.15,000/- ವರೆಗಿನ ತಕ್ಷಣದ ಕ್ರೆಡಿಟ್ ಸೌಲಭ್ಯವನ್ನು ಒದಗಿಸುವುದನ್ನು DBS ಬ್ಯಾಂಕ್ ಪರಿಗಣಿಸುತ್ತದೆ. 1 ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಬ್ಯಾಂಕ್‌ನಲ್ಲಿ ಖಾತೆಯನ್ನು ಹೊಂದಿರುವ ಮತ್ತು ಬ್ಯಾಂಕಿನ KYC ಮಾನದಂಡಗಳನ್ನು ಪೂರೈಸಿದ ಗ್ರಾಹಕರಿಗೆ ಈ ಸೌಲಭ್ಯವನ್ನು ಒದಗಿಸಲಾಗುತ್ತದೆ. ಗ್ರಾಹಕರು ಮಾಡಿದ ನಿರ್ದಿಷ್ಟ ವಿನಂತಿಯ ಮೇರೆಗೆ ತಕ್ಷಣದ ಕ್ರೆಡಿಟ್ ಸೌಲಭ್ಯವನ್ನು ಒದಗಿಸಲಾಗುತ್ತದೆ. DBS ಬ್ಯಾಂಕ್ ನಿಗದಿಪಡಿಸಿದಂತೆ ಶುಲ್ಕಗಳನ್ನು ಹಿಂಪಡೆಯುತ್ತದೆ ಮತ್ತು ಬ್ಯಾಂಕ್‌ನಿಂದ ಹಣದ ನಿಜವಾದ ಸ್ವೀಕೃತಿಯ ತನಕ ತಕ್ಷಣದ ಕ್ರೆಡಿಟ್ ಸೌಲಭ್ಯಕ್ಕಾಗಿ ಮಾರ್ಜಿನಲ್ ಕಾಸ್ಟ್ ಲೆಂಡಿಂಗ್ ದರದಲ್ಲಿ (1 ತಿಂಗಳು) (ಸೌಲಭ್ಯವನ್ನು ಪಡೆದುಕೊಳ್ಳುವ ಸಮಯದಲ್ಲಿ ಅನ್ವಯಿಸುವ) ಬಡ್ಡಿಯನ್ನು ವಿಧಿಸುತ್ತದೆ. ಆಯಾಯ ಕಾರ್ಪೊರೇಟ್ ಗ್ರಾಹಕರೊಂದಿಗಿನ ಒಪ್ಪಂದದ ಪ್ರಕಾರ ಕಾರ್ಪೊರೇಟ್ ಗ್ರಾಹಕರ ಔಟ್‌ಸ್ಟೇಷನ್ ಚೆಕ್‌ಗಳಿಗೆ ತಕ್ಷಣದ ಕ್ರೆಡಿಟ್ ಸೌಲಭ್ಯವನ್ನು ಒದಗಿಸುವುದನ್ನು DBS ಬ್ಯಾಂಕ್ ಪರಿಗಣಿಸುತ್ತದೆ.

<u>ತಿರಸ್ಕೃತ ಚೆಕ್ / ಚೆಕ್‌ಗಳ ಹಿಂತಿರುಗುವಿಕೆ</u>

ತಕ್ಷಣ ಕ್ರೆಡಿಟ್ ಒದಗಿಸಿದುದಕ್ಕಾಗಿ, ಬ್ಯಾಂಕ್ ಗೆ ನೀಡಿರುವ ಚೆಕ್, ಕಲೆಕ್ಷನ್ ಸಮಯದಲ್ಲಿ ನಗದಾಗದೆ ಹಿಂತಿರುಗಿದರೆ, ಅನ್ವಯವಾಗುವ ಶುಲ್ಕಗಳು ಮತ್ತು ಅದರ ಬಡ್ಡಿಯನ್ನು ಮರುಪಡೆಯುವುದರ ಜೊತೆಗೆ ಚೆಕ್‌ನ ಮೌಲ್ಯವನ್ನು ತಕ್ಷಣವೇ ಖಾತೆಗೆ ಡೆಬಿಟ್ ಮಾಡಲಾಗುತ್ತದೆ. ಬ್ಯಾಂಕ್‌ನಲ್ಲಿ ನಿರ್ದಿಷ್ಟ ನಗದು ನಿರ್ವಹಣೆ ಸೌಲಭ್ಯಗಳನ್ನು ಪಡೆಯುವವರನ್ನು ಹೊರತುಪಡಿಸಿ ಎಲ್ಲಾ ಗ್ರಾಹಕರ ಚೆಕ್ ಠೇವಣಿಗಳಿಗೆ ಮೇಲಿನ ಕ್ರಮಗಳು ಅನ್ವಯಿಸುತ್ತವೆ. ತಿರಸ್ಕೃತ ಇನ್ಸ್ಟ್ರುಮೆಂಟ್ ಗಳನ್ನು ಯಾವುದೇ ಸಂದರ್ಭದಲ್ಲಿ,ಯಾವುದೇ ವಿಳಂಬವಿಲ್ಲದೆ 24 ಗಂಟೆಗಳ ಒಳಗೆ, ತ್ವರಿತವಾಗಿ ಗ್ರಾಹಕರಿಗೆ ಹಿಂತಿರುಗಿಸಲಾಗುತ್ತದೆ / ರವಾನಿಸಲಾಗುತ್ತದೆ. ಮಾತ್ರವಲ್ಲದೆ

1. 1. ಬ್ಯಾಂಕ್‌ನಿಂದ ತಕ್ಷಣ ಕ್ರೆಡಿಟ್ ಅನ್ನು ಒದಗಿಸಿರುವುದಕ್ಕೆ, ಕಲೆಕ್ಷನ್ ಗಾಗಿ ಕಳುಹಿಸಲಾದ ಚೆಕ್ ಪಾವತಿ ಆಗದೆ ಹಿಂತಿರುಗಿದರೆ, ಚೆಕ್‌ನ ಮೌಲ್ಯವನ್ನು ತಕ್ಷಣವೇ ಖಾತೆಗೆ ಡೆಬಿಟ್ ಮಾಡಲಾಗುತ್ತದೆ. ಖಾತೆಯಲ್ಲಿ ಸಾಕಷ್ಟು ನಿಧಿ ಇಲ್ಲದಿದ್ದರೆ ಅವಧಿಗೆ ತಕ್ಕಂತೆ ಕ್ಲೀನ್ ಅಡ್ವಾನ್ಸ್ ದರದಲ್ಲಿ ಬ್ಯಾಂಕ್ ಬಡ್ಡಿಯನ್ನು ವಿಧಿಸುತ್ತದೆ.
2. ತಿರಸ್ಕೃತ ಚೆಕ್ ಹಣವು ಉಳಿತಾಯ ಖಾತೆಗೆ ಜಮಾ ಆಗಿದ್ದರೆ ಮತ್ತು ಅದರ ಆದಾಯವನ್ನು ಹಿಂಪಡೆಯದಿದ್ದರೆ, ಮೊತ್ತವು ಬಡ್ಡಿಯ ಪಾವತಿಗೆ ಅರ್ಹತೆ ಪಡೆಯುವುದಿಲ್ಲ.
3. ಖಾತೆಯಲ್ಲಿ ಹಣವಿಲ್ಲದೆ ಚೆಕ್/ಇನ್ಸ್ಟ್ರು ಮೆಂಟ್ ಪಾವತಿ ಆಗದೆ ಹಿಂತಿರುಗಿದಾಗ, ಆದಾಯವನ್ನು ಓವರ್‌ಡ್ರಾಫ್ಟ್/ಸಾಲ/ಕ್ರೆಡಿಟ್ ಕಾರ್ಡ್ ಖಾತೆಗೆ ಜಮಾ ಮಾಡಿದ್ದರೆ, ಕ್ರೆಡಿಟ್ ದಿನಾಂಕದಿಂದ ಹಿಂತಿರುಗಿದ ದಿನಾಂಕದವರೆಗೆ ಓವರ್‌ಡ್ರಾಫ್ಟ್/ಸಾಲಕ್ಕೆ ಅನ್ವಯವಾಗುವ ಬಡ್ಡಿ ದರಕ್ಕಿಂತ 2% ದರದಲ್ಲಿ ಬಡ್ಡಿಯನ್ನು ಮರುಪಡೆಯಲಾಗುತ್ತದೆ.
4. ಬ್ಯಾಂಕ್ ಕ್ರೆಡಿಟ್ ಒದಗಿಸಿದ ಕಲೆಕ್ಷನ್ ಗಾಗಿ ಕಳುಹಿಸಲಾದ ಚೆಕ್ ಪಾವತಿ ಆಗದೆ ಹಿಂತಿರುಗಿದರೆ, ಖಾತೆಯು ಡೆಬಿಟ್ ಬ್ಯಾಲೆನ್ಸ್‌ಗೆ ಹೋದರೂ ಚೆಕ್‌ನ ಮೌಲ್ಯವನ್ನು ತಕ್ಷಣವೇ ಖಾತೆಗೆ ಡೆಬಿಟ್ ಮಾಡಲಾಗುತ್ತದೆ ಮತ್ತು ಬಾಕಿ ಉಳಿದಿರುವ ಮೊತ್ತವನ್ನು ಯಾವುದೇ ಇತರ ಕ್ಲೀನ್ ಓವರ್‌ಡ್ರಾಫ್ಟ್‌ನಂತೆ ಪರಿಗಣಿಸಲಾಗುವುದು. ಖಾತೆಯಲ್ಲಿ ಹಣವಿಲ್ಲದೆ ಉಳಿದಿರುವ ಅವಧಿಗೆ ಕ್ಲೀನ್ ಅಡ್ವಾನ್ಸ್ ದರದಲ್ಲಿ ಬ್ಯಾಂಕ್ ಬಡ್ಡಿಯನ್ನು ವಿಧಿಸುತ್ತದೆ.
5. RBI ಮಾರ್ಗಸೂಚಿಗಳಿಗೆ ಅನುಗುಣವಾಗಿ, ಬ್ಯಾಂಕ್ ಕಾಲಕಾಲಕ್ಕೆ ಅನ್ವಯವಾಗುವ ದರಗಳಲ್ಲಿ "ಚೆಕ್ ರಿಟರ್ನ್ ಶುಲ್ಕಗಳನ್ನು" ವಿಧಿಸುತ್ತದೆ.

**<u>ರವಾನೆಯಲ್ಲಿ ಚೆಕ್ ಕಳೆದು ಹೋಗುವುದು</u>**

ಬ್ಯಾಂಕ್‌ನಿಂದ ಕಲೆಕ್ಷನ್ ಗಾಗಿ ಸ್ವೀಕರಿಸಿದ ಚೆಕ್ ಅಥವಾ ಇನ್ಸ್ಟ್ರುಮೆಂಟ್ ತರುವಾಯ ರವಾನೆ/ಸಾಗಣೆಯಲ್ಲಿ ಕಳೆದುಹೋದರೆ, ನಷ್ಟದ ಬಗ್ಗೆ ತಿಳಿದ ತಕ್ಷಣವೇ ಬ್ಯಾಂಕ್ ಗ್ರಾಹಕರಿಗೆ ತಿಳಿಸುತ್ತದೆ, ಇದರಿಂದಾಗಿ ಖಾತೆದಾರರು ಸ್ಟಾಪ್ ಪೇಮೆಂಟ್ ಅನ್ನು ದಾಖಲಿಸಲು ಡ್ರಾಯರ್‌ಗೆ ತಿಳಿಸಬಹುದು ಮತ್ತು ಕಳೆದುಹೋದ ಚೆಕ್‌ಗಳು / ಇನ್ಸ್ಟ್ರುಮೆಂಟ್ ಗಳ ಮೊತ್ತ ಕ್ರೆಡಿಟ್ ಆಗದ ಕಾರಣ ನೀಡಲಾದ ಇತರ ಚೆಕ್‌ಗಳು ತಿರಸ್ಕೃತವಾಗದಂತೆ ನೋಡಿಕೊಳ್ಳಬಹುದು. ಚೆಕ್‌ನ ಡ್ರಾಯರ್‌ನಿಂದ ಇನ್ಸ್ಟ್ರುಮೆಂಟ್ ನ ನಕಲು ಪ್ರತಿಯನ್ನು ಪಡೆಯಲು ಗ್ರಾಹಕರಿಗೆ ಬ್ಯಾಂಕ್ ಎಲ್ಲಾ ಸಹಾಯವನ್ನು ನೀಡುತ್ತದೆ. ಕ್ಲಿಯರಿಂಗ್ ಅಥವಾ ಸಂಗ್ರಹಣೆಗೆ ಕಳುಹಿಸಲಾದ ಬದಲಿ ಇನ್ಸ್ಟ್ರುಮೆಂಟ್ ಗೆ ಬ್ಯಾಂಕ್ ಹೆಚ್ಚುವರಿ ಶುಲ್ಕಗಳನ್ನು ವಿಧಿಸುವುದಿಲ್ಲ. ಚೆಕ್ ಪ್ರತಿ/ ಇನ್ಸ್ಟ್ರು ಮೆಂಟ್ ಗಳನ್ನು ಪಡೆಯುವಲ್ಲಿ ಗ್ರಾಹಕನ ಮೇಲೆ ಬೀಳುವ ಯಾವುದೇ ನೇರ ಮತ್ತು ಸಮಂಜಸವಾದ ಶುಲ್ಕಗಳನ್ನು ಸಂಬಂಧಿತ ಡಾಕ್ಯುಮೆಂಟರಿ ಪುರಾವೆಗಳನ್ನು ಒದಗಿಸಿದ ನಂತರ ಮತ್ತು ಬ್ಯಾಂಕಿನ ಪರಿಹಾರ ನೀತಿಗೆ ಅನುಗುಣವಾಗಿ ಬ್ಯಾಂಕ್ ಸರಿದೂಗಿಸುತ್ತದೆ, ಅದನ್ನು ಪಡೆಯುವಲ್ಲಿ ಸಂಭವಿಸಿದ ಸಮಂಜಸವಾದ ವಿಳಂಬಗಳಿಗೆ ಬಡ್ಡಿಯನ್ನು ನೀಡುತ್ತದೆ.

ಇದಲ್ಲದೆ, ಕಳೆದುಹೋದ ಚೆಕ್‌ಗಳು / ಇನ್ಸ್ಟ್ರು ಮೆಂಟ್ ಗಳ ಮೊತ್ತವನ್ನು ಕ್ರೆಡಿಟ್ ಮಾಡದ ಕಾರಣ ಅವರು ನೀಡಿದ ಇತರ ಚೆಕ್‌ಗಳು ತಿರಸ್ಕೃತವಾಗದಂತೆ ನೋಡಿಕೊಳ್ಳಲು ಬ್ಯಾಂಕ್ ಪ್ರಯತ್ನಿಸುತ್ತದೆ. ಅಂತಹ ನಷ್ಟದ ಹೊಣೆಗಾರಿಕೆಯು ಸಂಗ್ರಹಿಸುವ ಬ್ಯಾಂಕರ್ ಗೆ ಇರುತ್ತದೆಯೆ ಹೊರತು ಖಾತೆದಾರರದ್ದಲ್ಲ.

<u>ಫೋರ್ಸ್ ಮಜೂರ್</u>

ಫೋರ್ಸ್ ಮಜೂರ್ ಈವೆಂಟ್ ಎಂದರೆ ಪ್ರಾಕೃತಿಕ ಪ್ರಕೋಪಗಳಾದ ಪ್ರವಾಹ, ಬರ, ಭೂಕಂಪ ಅಥವಾ ಇತರ ನೈಸರ್ಗಿಕ ವಿಪತ್ತು ಅಥವಾ ಪರಿಸ್ಥಿತಿ, ವಿಪತ್ತು, ಸಾಂಕ್ರಾಮಿಕ, ಭಯೋತ್ಪಾದಕ ದಾಳಿ, ಯುದ್ಧ ಅಥವಾ ಗಲಭೆಗಳು, ಪರಮಾಣು, ರಾಸಾಯನಿಕ ಅಥವಾ ಜೈವಿಕ ಮಾಲಿನ್ಯ, ಕೈಗಾರಿಕಾ ಕ್ರಿಯೆ, ವಿದ್ಯುತ್ ವೈಫಲ್ಯ, ಕಂಪ್ಯೂಟರ್ ಸ್ಥಗಿತ ಅಥವಾ ವಿಧ್ವಂಸಕ ಕಾರ್ಯಗಳು ಮತ್ತು ಕಟ್ಟಡಗಳ ಕುಸಿತ, ಬೆಂಕಿ, ಸ್ಫೋಟ ಅಥವಾ ಅಪಘಾತ ಅಥವಾ ಬ್ಯಾಂಕಿನ ಸಮಂಜಸ ನಿಯಂತ್ರಣವನ್ನು ಮೀರಿದ ಇತರ ಕೃತ್ಯಗಳು.

ಫೋರ್ಸ್ ಮಜೂರ್ ಈವೆಂಟ್ ಅಥವಾ ಸನ್ನಿವೇಶದಿಂದ ಹೊರಬಂದು ಕಾರ್ಯಕ್ಷಮತೆ ಸಾಧ್ಯವಾಗುವವರೆಗೆ ಬ್ಯಾಂಕಿನ ಜವಾಬ್ದಾರಿಗಳ ಕೆಲಸ-ಕಾರ್ಯಗಳನ್ನು ಅಮಾನತುಗೊಳಿಸಲಾಗುತ್ತದೆ. ಉತ್ತಮ ಪ್ರಯತ್ನದ ಆಧಾರದ ಮೇಲೆ ಫೋರ್ಸ್ ಮಜೂರ್ ಈವೆಂಟ್‌ನ ಪರಿಣಾಮಗಳನ್ನು ಕಡಿಮೆ ಮಾಡಲು ಸಮಂಜಸವಾದ ಕ್ರಮ(ಗಳನ್ನು) ತೆಗೆದುಕೊಳ್ಳಲು ಬ್ಯಾಂಕ್ ಬದ್ಧವಾಗಿದೆ. ಯಾವುದೇ ಕೈಗಾರಿಕಾ ಕ್ರಮ, ವಿದ್ಯುತ್ ವೈಫಲ್ಯ, ಕಂಪ್ಯೂಟರ್ ಸ್ಥಗಿತ ಅಥವಾ ವಿಧ್ವಂಸಕತೆಯ ಸಂದರ್ಭದಲ್ಲಿ, ಬ್ಯಾಂಕ್ ತನ್ನ ಸೇವೆಗಳನ್ನು ಒದಗಿಸುವಲ್ಲಿ ವಿಳಂಬವನ್ನು ಕಡಿಮೆ ಮಾಡಲು ಸಮಂಜಸವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಮತ್ತು ತನ್ನ ಗ್ರಾಹಕರಿಗೆ ನಿರಂತರ ಸೇವೆಗಳನ್ನು ಒದಗಿಸಲು ಪ್ರಯತ್ನಿಸುತ್ತದೆ.

## 3 ಆಡಳಿತ

### 3.1 ಮಾಲೀಕತ್ವ ಮತ್ತು ಅನುಮೋದಿಸುವ ಅಧಿಕಾರ

DBS ಬ್ಯಾಂಕ್ ಇಂಡಿಯಾ ಲಿಮಿಟೆಡ್ (DBIL) ಸಿಂಗಾಪುರದಲ್ಲಿ ಪ್ರಧಾನ ಕಛೇರಿಯನ್ನು ಹೊಂದಿರುವ DBS ಬ್ಯಾಂಕ್ ಲಿಮಿಟೆಡ್ (DBL) ನ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾಗಿದೆ (WOS). DBIL ಸಂಕೀರ್ಣವಾದ, ದೀರ್ಘಾವಧಿಯ ಅವಧಿ, ದೊಡ್ಡ ಅಥವಾ ಪ್ರಮುಖ ವಹಿವಾಟುಗಳೊಂದಿಗೆ ವ್ಯವಹರಿಸುವಾಗ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವ ವಿಷಯದಲ್ಲಿ ಗುಂಪಿನ ಕನಿಷ್ಠ ಸ್ವೀಕಾರದ ಮಾನದಂಡಗಳಿಗೆ ಅನುಸರಣೆಯಲ್ಲಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು DBL ನ ಅನುಭವ ಮತ್ತು ಪರಿಣತಿಯನ್ನು ಪಡೆದುಕೊಳ್ಳುತ್ತದೆ.

ಈ ನೀತಿಯು ವಿತರಕರ ಒಡೆತನದಲ್ಲಿರುತ್ತದೆ ಮತ್ತು ಬ್ಯಾಂಕ್‌ನ ಮಂಡಳಿಯಿಂದ ಅನುಮೋದಿಸಲ್ಪಟ್ಟಿದೆ.

### 3.2 ವಿಚಲನಗಳು

ಯಾವುದೇ ಹೆಚ್ಚುವರಿ ಅಂಶಗಳು ಸೇರಿದಂತೆ ಯಾವುದೇ ವಿಚಲನಗಳು ವಿತರಕರು ದಾಖಲಿಸಿದ ಮತ್ತು ಬ್ಯಾಂಕ್‌ನ ಮಂಡಳಿಯಿಂದ ಅನುಮೋದಿತವಾದ ಅಸಾಧಾರಣ ಅಂಶಗಳ ಆಧಾರದ ಮೇಲೆ ಇರುತ್ತವೆ. ವಸ್ತುನಿಷ್ಠವಲ್ಲದ, ಆದರೆ ಪ್ರಾಸಂಗಿಕ ಅಥವಾ ಆಡಳಿತಾತ್ಮಕ ಸ್ವರೂಪದಲ್ಲಿರುವ ಯಾವುದೇ ಬದಲಾವಣೆಗಳಿಗೆ ಅನುಮೋದಿಸುವ ಪ್ರಾಧಿಕಾರದಿಂದ ಸೈನ್-ಆಫ್ ಅಗತ್ಯವಿರುವುದಿಲ್ಲ. ಕಾರ್ಪೊರೇಟ್ ಗ್ರಾಹಕರ ಚೆಕ್ ಕಲೆಕ್ಷನ್ ಗಳು ಸೇವೆಯನ್ನು ನೀಡುವ ಸಮಯದಲ್ಲಿ ಕಾರ್ಪೊರೇಟ್ ಗ್ರಾಹಕರೊಂದಿಗೆ ಮಾಡಿದ ಒಪ್ಪಂದದ ನಿಯಮಗಳ ಪ್ರಕಾರ ಇರುತ್ತದೆ.

### 3.3 ಪರಿಶೀಲನೆ

ಈ ನೀತಿಯ ಮುಂದುವರಿದ ಪ್ರಸ್ತುತತೆಯನ್ನು ಖಚಿತಪಡಿಸಿಕೊಳ್ಳಲು ವಾರ್ಷಿಕ ಆಧಾರದ ಮೇಲೆ (ಮೂರು ತಿಂಗಳವರೆಗಿನ ಹೆಚ್ಚುವರಿ ಅವಧಿಯೊಂದಿಗೆ) ಅಥವಾ ವಿಷಯ ಬದಲಾವಣೆಗಳು ಅಗತ್ಯವಿದ್ದಾಗ/ಸೂಕ್ತವೆನಿಸಿದಾಗ ಪರಿಶೀಲಿಸಬೇಕು.

## ಅನುಬಂಧ 1 ವಿಚಲನಾ ವರದಿ

| ಜಾರಿ ದಿನಾಂಕ | ವಿಭಾಗ | ದೃಡೀಕರಿಸಿದವರು & ದೃಡೀಕರಣ ದಿನಾಂಕ | ಅನುಮೋದಿಸಿದವರು & ಅನುಮೋದನೆ ದಿನಾಂಕ | ವಿಚಲನ ವಿವರಣೆ | ವಿಚಲನೆಗೆ ಕಾರಣ |
|---|---|---|---|---|---|
| ದಿದಿ ತಿಂತಿಂ ವವವವ | ಈ ದಾಖಲೆಯಲ್ಲಿ ವಿಚಲನೆ ಸಂಭವಿಸುವ | ದೃಡೀಕರಣ ತಂಡ/ದೇಶ ಘಟಕದ ಮುಖ್ಯಸ್ಥರು/ | ವಿಚಲನೆಗಾಗಿ ದಾಖಲೆಯ ಮಾಲೀಕರಿಂದ | ಇದು ವಿಭಾಗಕ್ಕೆ ಅನ್ವಯವಾಗುವ ವಿಚಲನೆಯನ್ನು ವಿವರಿಸುತ್ತದೆ | ಇದು ವಿಚಲನಗೆ ಕಾರಣಗಳನ್ನು ವಿವರಿಸುತ್ತದೆ |

| | | | | | |
|---|---|---|---|---|---|
| | ವಿಭಾಗ | ವಿಚಲನಕ್ಕೆ ಅನ್ವಯಿಸಲಾದ ಕಾರ್ಯವಿಧಾನ<br><br><br>ಧೃಡೀಕರಣ ದಿನಾಂಕ: ದಿದಿ ತಿಂತಿಂ ವವವವ | ಅನುಮೋದನೆ<br><br>ಅನುಮೋದನೆ ದಿನಾಂಕ: ದಿದಿ ತಿಂತಿಂ ವವವವ | | |
| - | - | - | - | - | - |

| ಅನುಬಂಧ **2** | ಆವೃತ್ತಿ ಇತಿಹಾಸ | |
|---|---|---|
| ಆವೃತ್ತಿ | ಜಾರಿ ದಿನಾಂಕ | ಪ್ರಮುಖ ಬದಲಾವಣೆಗಳ ಸಾರಾಂಶ |
| 1.0 | ಮೇ 2019 | ಮೊದಲ ಸಂಚಿಕೆ (DBS ಇಂಡಿಯಾವನ್ನು ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಯಾಗಿ ಸಂಯೋಜಿಸಿದ ನಂತರ) |
| 2.0 | ಫೆಬ್ರವರಿ2022 | ಎಲ್ಲಾ DBIL ಶಾಖೆಗಳಿಗೆ ನೀತಿಯನ್ನು ಅನ್ವಯಿಸುವಂತೆ ಮಾಡಲು ಶಾಖೆಗಳ ಪಟ್ಟಿಯ ಉಲ್ಲೇಖವನ್ನು ತೆಗೆದುಹಾಕಲಾಗಿದೆ.<br><br>CTS ಕ್ಲಿಯರಿಂಗ್‌ನಲ್ಲಿ ಹೆಚ್ಚಿನ ಬ್ಯಾಂಕ್‌ಗಳು ಭಾಗವಹಿಸುವುದರಿಂದ ಪ್ರಸ್ತುತ ಚೆಕ್ ಕ್ಲಿಯರಿಂಗ್ ಅನ್ನು ಪ್ರತಿಬಿಂಬಿಸಲು ಭಾಷೆಯನ್ನು ನವೀಕರಿಸಲಾಗಿದೆ. |